# ಹಳ್ಳಿ ಬೇಕು ಚಿರತೆ ಸಾಕು

**ಕಾಡಿನ ಚಿರತೆ ಊರುಗಳಿಗೆ ಬರುತ್ತಿದೆ! ಈ ಅಭ್ಯಾಗತನ ಭೇಟಿಗಳಲ್ಲಿ ನಾಡಿನ ಜನರಿಗೆ ಪಾಠಗಳೇನಾದರೂ ಇವೆಯೆ?**

■ ಹರಿಪ್ರಸಾದ್ ಕೆ.ಆರ್.



ಇನ್ನೇನು ಹಗಲು ಹಾರಿ, ಇರುಳು ಇಳೆಗೆ ಇಳಿದುಕೊಳ್ಳುವ ಹೊತ್ತು. ತೋಟದಲ್ಲಿ ಸೋಗೆ ಎಡೆಮಟ್ಟೆ ಕತ್ತರಿಸಿ ಗುಂಡಿಗೆ ತುಂಬುತ್ತಿದ್ದೆ. ಇನ್ನೊಂದು ಮಡಿಯ ಕೆಲಸ ಬಾಕಿ ಇತ್ತು. ಸೊಳ್ಳೆಗಳು ರಾಗ ಪಾಡುತ್ತಾ ಮೈಯನ್ನು ಮುತ್ತಿಕ್ಕುತ್ತಿದ್ದವು. ಆದರೂ ಮುಂದುವರಿಸಿದೆ. ಎಡೆಮಟ್ಟೆ ಕಡಿದು ಗುಂಡಿಯ ಬಳಿ ಹಾಕಬೇಕಿತ್ತು. ಅಷ್ಟು ದೂರ ಹೋಗೋದು ಯಾಕೆ ಎಂದುಕೊಂಡು ಎಡೆಮಟ್ಟೆಯೊಂದನ್ನು ಗುಂಡಿಯ ಕಡೆ ಎಸೆದೆ. ಒಮ್ಮೆಲೆ ದಢದಢ ಸದ್ದು. ಹಂದಿ ಇರಬಹುದು ಎಂದು ನೋಡಿದರೆ ಅದು ಹಂದಿಯಲ್ಲ. ಅಪ್ಪಟ ಚಿರತೆ! ನಾನು ನಿಂತಿದ್ದ ವಿರುದ್ಧ ದಿಕ್ಕಿಗೆ ಓಡುತ್ತಿದೆ... ಒಂದು ಕ್ಷಣ ಮೈ ಮರಗಟ್ಟಿ ಹೋಯಿತು. ಚಿರತೆಯನ್ನು ಅಷ್ಟು ಹತ್ತಿರದಿಂದ ಎಂದೂ ಕಂಡಿರಲಿಲ್ಲ. ಚಿರತೆ ನೋಡಲು ಕುಳ್ಳು. ಆದರೆ ಮೈಯಂತೂ ಉದ್ದವೋ ಉದ್ದ. ಅದು ಓಡುತ್ತಿದ್ದ ಪರಿ ನೋಡಿದರೆ ಅದೂ ಕೂಡ ಹೆದರಿದಂತೆ ತೋರುತ್ತಿತ್ತು. ನಾನು ಮೂರ್ಛೆ ಹೋಗಿರಲಿಲ್ಲ ಅಷ್ಟೇ.

ಕಳೆದ ಕೆಲವು ತಿಂಗಳುಗಳಿಂದ ಚಿರತೆ ಊರಿನಲ್ಲಿ ಸುದ್ದಿ ಮಾಡುತ್ತಲೇ ಇತ್ತು. ಯಾರದೋ ತೋಟದಲಿ ಹಸು ತಿಂದು ಹೋಗಿತ್ತು. ಮತ್ಯಾರದೋ ಕುರಿಯನ್ನು ಕಬಳಿಸಿತ್ತು. ಇಷ್ಟು ಸಾಲದು ಎಂಬಂತೆ ಕತ್ತೆ ಮಂದೆಯ ಬೇಲಿಯನ್ನು ಹಾರಿ ಒಂದೆರಡು ಕತ್ತೆಗಳನ್ನು ರುಚಿ ನೋಡಿತ್ತು. ಆಗೀಗ ತೋಟದಲ್ಲಿಯೂ ಹೆಜ್ಜೆಗುರುತು ಕಂಡು ಬೆಚ್ಚುವಂತಾಗಿತ್ತು.

ಪರಿಚಿತರಾದ ಅರಣ್ಯಾಧಿಕಾರಿಯೊಬ್ಬರನ್ನು ಈ ಕುರಿತು ವಿಚಾರಿಸಿದೆ. ಅವರು ‘ಹೆದರುವ ಅಗತ್ಯವೇನಿಲ್ಲ. ತೋಟದಲ್ಲಿ ಇರುವಾಗ ಶಬ್ದ ಮಾಡಿಕೊಂಡು ಓಡಾಡಿದರೆ ಸಾಕು’ ಎಂದರು. ಅನೇಕ ಗೆಳೆಯ ಗೆಳತಿಯರು ವೃತ್ತಿಯಾಧಾರಿತ ಸಲಹೆಗಳನ್ನು ನೀಡಿದರು.

ಪ್ರಕಾಶಕನೊಬ್ಬನು ‘ಜಿಮ್ ಕಾರ್ಬೆಟ್ ಪುಸ್ತಕಗಳನ್ನು ಓದಿದರೆ ನಿನಗೆ ಧೈರ್ಯ ಬರುತ್ತದೆ’ ಎಂದನು. ಕಲಾವಿದನು ‘ಚಿರತೆಯ ಮುಖವಾಡ ಮಾಡಿಕೊಡ್ತೀನಿ. ಹಾಕ್ಕೊಂಡು ಓಡಾಡು, ಚಿರತೆಗೆ ಕನ್‌ಫ್ಯೂಸ್ ಆಗೋಗುತ್ತೆ’ ಎಂದು ನಗಾಡಿದನು.

ನಾಟ್ಯಪಟುವೊಬ್ಬಳು ‘ನನ್ನ ಹಳೇ ಗೆಜ್ಜೆ ಕೊಡ್ತೀನಿ. ಕಟ್ಟಿಕೊಂಡು ಓಡಾಡು. ಚಿರತೆ ಬರುವುದಿಲ್ಲ. ನಿನ್ನ ನಡಿಗೆಯೂ ಸುಧಾರಿಸುತ್ತದೆ’ ಎಂದಳು. ಪಟಾಕಿ ವ್ಯಾಪಾರಿಯು ‘ಬೆಳ್ಳುಳ್ಳಿ ಪಟಾಕಿ ಕೊಡ್ತೀನಿ. ಹೋದಾಗ ಬಂದಾಗ ಪಟಾಕಿ ಹೊಡಿ. ಚಿರತೆ ನಿನ್ನ ಸಾವಾಸಕ್ಕೆ ಬಂದರೆ ಕೇಳು’ ಎಂದನು. ಪೂಜಾರಿಯು ‘ಗಂಟೆ ಕಟ್ಟಿಕೊಂಡು ಓಡಾಡುವುದು ತುಂಬಾ ಸೂಕ್ತ. ಮೇಲಾಗಿ ದೇವರ ಕೃಪೆಯೂ ಲಭ್ಯ’ ಎಂದುಬಿಟ್ಟನು.

ಶಬ್ದ ಮಾಡಿಕೊಂಡು ಓಡಾಡುವುದು ಇಷ್ಟು ಕಷ್ಟವೇ? ಶಿಳ್ಳೆ ಹಾಕಿಕೊಂಡು ಓಡಾಡಬಹುದು. ತೋಟದಲ್ಲಿದ್ದಷ್ಟೂ ಕಾಲ ಇದನ್ನೇ ಮಾಡುತ್ತಾ ಕೂತರೆ ಬಾಯಿ, ಗಂಟಲು ಏನಾಗಬೇಕು? ಜಾಗಟೆ ಬಾರಿಸುತ್ತಾ ಓಡಾಡಿದರೆ ಹೇಗೆ ಎಂಬ ಯೋಚನೆ ಬಂತು. ಆಗ ರೈತನ ಕಸುಬು ಮರೆತು ದಾಸಯ್ಯನಾಗಿ ಪರಿವರ್ತನೆ ಆಗಿಬಿಟ್ರೆ? ಹೀಗೆ ಯೋಚಿಸುತ್ತಿರುವಾಗ ಅಜ್ಜನ ಕೋಲು ಕಣ್ಣಿಗೆ ಬಿತ್ತು. ಭಾರೀ ಎತ್ತರದ ಆಳಾಗಿದ್ದ ಅಜ್ಜನ ಕೋಲು ಗಟ್ಟಿಮುಟ್ಟಾಗಿಯೂ ಎತ್ತರವಾಗಿಯೂ ಇತ್ತು. ಅದರ ತುದಿಗೆ ಎತ್ತಿನ ಕೊರಳಿಗೆ ಕಟ್ಟುವ ಗೆಜ್ಜೆ ಕಟ್ಟಿಕೊಂಡು ಓಡಾಡಿದರೆ ಹೇಗೆ? ಕೋಲನ್ನು ನೆಲಕ್ಕೆ ಜೋರಾಗಿ ಕುಟ್ಟಿಕೊಂಡು ಓಡಾಡಿದರೆ ಗೆಜ್ಜೆ ಶಬ್ದಕ್ಕೆ ಚಿರತೆಯೇನು ಅದರವ್ವನೂ ಅಂಜಬೇಕು. ಅಪ್ಪಿತಪ್ಪಿ ಎದುರಿಗೆ ಬಂದರೆ ಆಗ ಕೋಲಿನಲ್ಲೇ ಬಾರಿಸಿ ಬಿಡಬಹುದು.

ಗೆಜ್ಜೆಯ ಕೋಲಿನ ಐಡಿಯಾ ಚಲಾವಣೆಗೆ ತಂದು ಹುರುಪಿನಿಂದ ತೋಟದ ತುಂಬೆಲ್ಲ ಓಡಾಡಿದೆ. ಪೊದೆಗಳು ಇರುವ ಕಡೆ ಸ್ವಲ್ಪ ಜಾಸ್ತಿ ಶಬ್ದ ಮಾಡಿಕೊಂಡೇ ಓಡಾಡಿದೆ. ಈ ಶಬ್ದಕಂಜಿ ಕೆಲವು ಹಕ್ಕಿಪಕ್ಕಿಗಳು ಪುರ್ ಎಂದು ಹಾರಿಬಿಡುತ್ತಿದ್ದವು. ಈ ಆವಿಷ್ಕಾರದಿಂದ ತೋಟದಲ್ಲಿ ಮೊಲಗಳು ಇವೆಯೆಂದು ರುಜುವಾತು ಆಯಿತು. ಒಂದಷ್ಟು ದಿನಗಳು ಇದು ನಡೆಯಿತು. ನನ್ನ ಕಾಲು ಸದ್ದಿಗೋ, ಅಜ್ಜನ ಕೋಲಿನ ಗೆಜ್ಜೆ ಸದ್ದಿಗೋ ಅದು ಹೆದರಿರಲೇಬೇಕು. ಚಿರತೆಯಂತೂ ಕಾಣಲಿಲ್ಲ. ನನ್ನ ಪ್ರಯೋಗಕ್ಕೆ ನಾನೇ ಹೆಮ್ಮೆಪಟ್ಟುಕೊಂಡೆ. ಸುಮಾರು ದಿನಗಳು ಈ ಹೆಜ್ಜೆ–ಗೆಜ್ಜೆ ಜುಗಲಬಂದಿ ನಡೆಯಿತು. ಆಮೇಲಾಮೇಲೆ ಬೇಸರವಾಗಿ ಅಜ್ಜನ ಗೆಜ್ಜೆ ಕೋಲು ಯಥಾಪ್ರಕಾರ ಮೂಲೆ ಸೇರಿಕೊಂಡಿತು.

ಇದಾಗಿ ವರ್ಷದ ಮೇಲಾಗಿತ್ತು. ಬೇಲಿಯ ರೋಜಾ ಗಿಡಗಳು ವಿಪರೀತ ಬೆಳೆದು ನಿಂತಿದ್ದವು. ಒಂದು ಮಧ್ಯಾಹ್ನ ಮಚ್ಚಿನಿಂದ ಗಿಡಗಳನ್ನು ಕತ್ತರಿಸುತ್ತಾ